Center for Management Studies
JAIN UNIVERSITY

National Theater Festival 2015

**ಪ್ರಿಯ ಸ್ಪರ್ಧಾರ್ಥಿಗಳೇ,**

ಜೈನ್ ವಿಶ್ವವಿದ್ಯಾಲಯ – ಸಿ.ಎಂ.ಎಸ್. ಜೈನ್ ವಿದ್ಯಾಸಂಸ್ಥೆಗಳಲ್ಲಿನ ಮುಂಚೂಣಿಯ ಶಾಖೆಯಾಗಿದೆ. ಯುವ ಭಾರತೀಯರನ್ನು ಜಾಗರೂಕ ದಕ್ಷ ಮತ್ತು ಶಕ್ತ ಅಧಿಕಾರಿಯುತರನ್ನಾಗಿಸುವತ್ತ ಸಿ.ಎಂ.ಎಸ್. ತನ್ನ ದೃಷ್ಟಿಕೋನವನ್ನು ಇರಿಸಿದೆ. ಜೊತೆಗೆ ಸತತವಾಗಿ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾಧನೆಯತ್ತ ದೃಷ್ಟಿ ಬೀರಿದೆ.

ಜೀವನ ಕಲೆಯನ್ನು ತಿಳಿಸುವ ಉತ್ತಮ ಶಿಕ್ಷಕ ರಂಗಭೂಮಿ ಎಂಬ ತತ್ವ ನುಡಿಯೊಂದಿಗೆ, ರಂಗಭೂಮಿ ಭಾವಾಭಿವ್ಯಕ್ತಿ ಮತ್ತು ಸಾಮಾಜಿಕ ಬದಲಾವಣೆಯನ್ನು ಪ್ರತಿಬಿಂಬಿಸುವ ಶಕ್ತಿಯುತ ವೇದಿಕೆ ಎಂಬ ನಂಬಿಕೆಯೊಂದಿಗೆ 'ಅಭಿನಯ' ರಾಷ್ಟ್ರಮಟ್ಟದ ಕಿರುನಾಟಕ ಸ್ಪರ್ಧೆಯನ್ನು ಜೆಯು–ಸಿ.ಎಂ.ಎಸ್. 2008ರಿಂದ ಸಂಘಟಿಸಿ ಉತ್ತೇಜನವನ್ನು ನೀಡುತ್ತ ಬಂದಿದೆ. ನಾಡಿನ ವಿವಿಧ ಭಾಗಗಳ ಕಾಲೇಜು, ಹವ್ಯಾಸಿ ಮತ್ತು ವೃತ್ತಿಪರೇತರ ತಂಡಗಳು ಭಾಗವಹಿಸಿ 'ಅಭಿನಯ' ನಾಟಕ ಸ್ಪರ್ಧೆ ಯಶಸ್ವಿಯಾಗಿ ಸಾಗಿದೆ.

ಈ ಬಾರಿಯ ಅಭಿನಯ ಸ್ಪರ್ಧೆಯಲ್ಲಿ ಬದಲಾವಣೆ ತರಲಾಗಿದೆ. ರಂಗಭೂಮಿಯ ಚಟುವಟಿಕೆಯಲ್ಲಿ ಯುವ ಜನಾಂಗದ ಆಸಕ್ತಿಯನ್ನು ಪ್ರೇರೇಪಿಸಿ ಪ್ರೋತ್ಸಾಹಿಸೋಣ ಎಂದು 10 ದಿನಗಳ 'ರಂಗ ಶಿಬಿರ' ವನ್ನು ಜೆಯು ಸಿ.ಎಂ.ಎಸ್. ನಲ್ಲಿ ಏರ್ಪಡಿಸಲಾಗಿದೆ. ರಂಗಭೂಮಿ ತಜ್ಞರ ಮಾರ್ಗದರ್ಶನದಲ್ಲಿ ಶಿಬಿರ ಕಾರ್ಯ ಚಟುವಟಿಕೆ ನಡೆಯುವುದು. ಶಿಬಿರದ ನಂತರ ಮಾರ್ಚ್ 01 ಅಥವಾ 02 ರಲ್ಲಿ ನಡೆಯುವ ಸಿ.ಎಂ.ಎಸ್. ಹಬ್ಬದಲ್ಲಿ 20 ನಿಮಿಷಗಳ ರಂಗ ಪ್ರದರ್ಶನ ಇರುವುದು. ಈ ಶಿಬಿರವನ್ನು ಕೇವಲ ಪದವಿ ಕಾಲೇಜಿನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಮೀಸಲಾಗಿರಿಸಿದೆ. ಶಿಬಿರಕ್ಕೆ ಯಾವುದೇ ಪ್ರವೇಶ ಶುಲ್ಕ ಇರುವುದಿಲ್ಲ.

**ಅಭಿನಯ ರಂಗ ಶಿಬಿರಕ್ಕೆ ಭಾಗವಹಿಸಲು ಪ್ರವೇಶ ಅರ್ಜಿಗಳನ್ನು 06ನೇ ಜನವರಿ 2015ರಿಂದ ಕೆಳಗಿನ ವಿಳಾಸದಲ್ಲಿ ಪಡೆಯಬಹುದು.**

**ಜೆಯು – ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ನಂ.1/1–1, ಏಟ್ರಿಯ ಟವರ್, ಅರಮನೆ ರಸ್ತೆ, ಬೆಂಗಳೂರು – 560001.**

ದೂರವಾಣಿ ಸಂಖ್ಯೆ: 080 – 43430200 ಇ–ಮೇಲ್: abhinayacms@gmail.com ವೆಬ್‌ಸೈಟ್ : www.cms.ac.in

ಪ್ರವೇಶ ಅರ್ಜಿಗಳನ್ನು www.cms.ac.in ಈ ವಿಳಾಸದಲ್ಲಿ ಪ್ರತಿಗಳನ್ನು ಪಡೆಯಬಹುದು.

**ಅರ್ಜಿಸಲ್ಲಿಸಲು ಕೊನೆಯ ದಿನಾಂಕ: 20ನೇ ಜನವರಿ 2015**

ವಿವರಗಳಿಗೆ ಸಂಪರ್ಕಿಸಿ: **ಶ್ರೀಮತಿ ಹೇಮಲತಾ – 9481607542, ಶ್ರೀಮತಿ ಜಯಶ್ರೀ – 9886403331**

ಧನ್ಯವಾದಗಳೊಂದಿಗೆ

ದಿನೇಶ್ ಎನ್.
ವಿಭಾಗ ಮುಖ್ಯಸ್ಥರು
ಜೆಯು–ಸಿ.ಎಂ.ಎಸ್

Center for Management Studies
JAIN UNIVERSITY

National Theater Festival 2015

**ವಿದ್ಯಾರ್ಥಿಗಳ ಗಮನಕ್ಕೆ,**

- ಒಂದು ಕಾಲೇಜಿನಿಂದ ಕನಿಷ್ಠ 02 ಗರಿಷ್ಠ 05 ಮಂದಿ ನೋಂದಾಯಿಸಿಕೊಳ್ಳಬಹುದು. (ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ)
- ರಂಗ ಶಿಬಿರಕ್ಕೆ ಪ್ರವೇಶ ಸಂಪೂರ್ಣ ಉಚಿತ.
- ನೋಂದಾಯಿಸಲು ಕೊನೆಯ ದಿನಾಂಕ 20ನೇ ಜನವರಿ 2015.
- ನೋಂದಣಿ ಮಾಡುವ ವಿದ್ಯಾರ್ಥಿಗಳು ಖಚಿತವಾಗಿ ನಿಮ್ಮ ಕಾಲೇಜಿನ ಪ್ರಾಂಶುಪಾಲರ ಸಹಿ ಇರುವ ಒಪ್ಪಿಗೆ ಪತ್ರವನ್ನು ನಮಗೆ ನೀಡಬೇಕು.
- ಮೊದಲು ಬಂದವರಿಗೆ ಆದ್ಯತೆ.
- ನೋಂದಣಿ ಮಾಡಿದ ವಿದ್ಯಾರ್ಥಿಗಳು ತಪ್ಪದೇ 10 ದಿನವು ಶಿಬಿರಕ್ಕೆ ಭಾಗಿಯಾಗಿ, ಶಿಸ್ತು ಕಾಪಾಡಿಕೊಳ್ಳಬೇಕು.
- 10 ದಿನವು ಹಾಜರಾದವರಿಗೆ ಮಾತ್ರ ಪ್ರಮಾಣ ಪತ್ರ ನೀಡಲಾಗುವುದು
- ಶಿಬಿರದ ದಿನಾಂಕ 05ನೇ ಫೆಬ್ರವರಿಯಿಂದ 15ನೇ ಫೆಬ್ರವರಿ 2015ನೇ ವರೆಗೆ, **ಸಮಯ: ಮಧ್ಯಾಹ್ನ 3 ರಿಂದ ಸಂಜೆ 6ರ ವರಗೆ.**

## REGISTRATION FORM

**Name of the Institution / Group :** ____________________

**Name of the Participant :** ____________________

**Address :** ____________________

____________________

____________________

**Email :** ____________________

**Contact details (Two Phone Nos) :** __________ __________

**Category :** KAN

**Signature of the Principal :** ____________________

**List of participants**

| Name of the Participant | Contact Number |
|---|---|
| | |
| | |
| | |
| | |